ನಿಯೋಜನೆಯ ಮೇರೆಗೆ ಹೋದವರನ್ನು ಇಲಾಖೆಗೆ ಅವರ ಅವಶ್ಯಕತೆ ಇದ್ದರೆ ಅವರನ್ನು ವಾಪಸ್ಸು ಕರೆಸಿಕೊಳ್ಳುವಂತಹ ಕೆಲಸವನ್ನು ನಾವು ಅಂತಹ ಸಮಯ ಬಂದಾಗ ಮಾಡುತ್ತೇವೆ.

ಬಸವನಬಾಗೇವಾಡಿಯಲ್ಲಿ 33 ಕೆ.ವಿ. ಸಬ್‌ಸ್ಟೇಷನ್ ನಿರ್ಮಾಣ ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 79(304)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ)

ಪ್ರಶ್ನೆ

ಅ. ಬಸವನಬಾಗೇವಾಡಿಯಲ್ಲಿನ ಮನಗೂಳಿಯಲ್ಲಿ 33 ಕೆ.ವಿ. ಸಬ್ ಸ್ಟೇಷನ್ ನಿರ್ಮಾಣದ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಆ. ಈ ಯೋಜನೆಗೆ ನಿಗದಿ ಪಡಿಸಿರುವ ಹಣ ಎಷ್ಟು? ಈ ಯೋಜನೆಯನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು?

ಉತ್ತರಿಸಲಿರುವ ಸಚಿವರು: ಶ್ರೀ ವೀರಕುಮಾರ್ ಅ.ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ. ಮನಗೂಳಿಯಲ್ಲಿ ಒಂದು 33:11 ಕೆ.ವಿ. ಸಬ್-ಸ್ಟೇಷನ್ ನಿರ್ಮಾಣ ಮಾಡಲು ನಿಗಮದ ತಾಂತ್ರಿಕ ಸಮಿತಿ ಅನುಮೋದಿಸಿದೆ. ಆಡಳಿತಾತ್ಮಕ ಮಂಜೂರಿ ದೊರೆಯ ಬೇಕಾಗಿದೆ ಮತ್ತು ಭೂ ಸ್ವಾಧೀನ ಕ್ರಿಯೆ ಪ್ರಗತಿಯಲ್ಲಿದೆ.

ಆ. ಈ ಯೋಜನೆಯ ಅಂದಾಜು ವೆಚ್ಚ ರೂ.180 ಲಕ್ಷ ಆಡಳಿತಾತ್ಮಕ ಮಂಜೂರಾತಿ ಮತ್ತು ಆರ್ಥಿಕ ವ್ಯವಸ್ಥೆ ಆದ ನಂತರ ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ: ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು, ಆಡಳಿತಾತ್ಮಕ ಮಂಜೂರಾತಿ ದೊರೆಯಬೇಕಾಗಿದೆ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ 6 ತಿಂಗಳ ಹಿಂದೆ ಸಂಬಂಧಪಟ್ಟ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಜಮೀನು ಮಾಲೀಕರಿಗೆ ಹಣವನ್ನು ಕೊಡಲಾಗಿದೆ. ದಯವಿಟ್ಟು ಅಲ್ಲಿರತಕ್ಕಂತಹ ವಿದ್ಯುತ್ ತೊಂದರೆಯನ್ನು ನೀಗಿಸುವ ಸಲುವಾಗಿ ಬರುವ ಏಪ್ರಿಲ್‌ನಲ್ಲಿ ಆ ಒಂದು ಕೆಲಸವನ್ನು ಟೆಂಡರ್ ಮೂಲಕವಾಗಿ ತೆಗೆದುಕೊಂಡು ಅದನ್ನು ಪೂರ್ಣ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಇಂಧನ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ.ವೀರಕುಮಾರ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ 33:11 ಕೆ.ವಿ. ಸಬ್ ಸ್ಟೇಷನ್ ಬಗ್ಗೆ ಬರುವ ವರ್ಷದಲ್ಲಿ ಅದನ್ನು ತೆಗೆದುಕೊಂಡು ಒಂದೂವರೆ ವರ್ಷದಲ್ಲಿ ಮುಗಿಸುತ್ತೇವೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ: ಇದರ ಜೊತೆಗೆ ಇನ್ನೊಂದು ವಿಚಾರ ಹೇಳುವುದಾದರೆ, ನನ್ನ ಮತಕ್ಷೇತ್ರವಾದ ಬಸವನಬಾಗೇವಾಡಿ ಹಾಗೂ ಬಿಜಾಪುರ ತಾಲ್ಲೂಕು ಬೂದುಮಿಶ್ರಿತ ಎಂದು ನಿರ್ಬಂಧಕ್ಕೆ ಒಳಪಟ್ಟಿದೆ. ಅದೇ ಪ್ರಕಾರವಾಗಿ ಇಂಡಿ ತಾಲ್ಲೂಕು ಕಪ್ಪು ಮಿಶ್ರಿತ ಎಂದು ನಿರ್ಬಂಧಕ್ಕೆ ಒಳಪಟ್ಟಿದೆ. ಅದೇ ಪ್ರಕಾರವಾಗಿ ರಾಜ್ಯದಲ್ಲಿ ಸುಮಾರು 43 ತಾಲ್ಲೂಕುಗಳೂ ಕೂಡ ಇಂತಹ ನಿರ್ಬಂಧಗಳಿಗೆ ಒಳಪಟ್ಟಿದ್ದು, ರೈತರಿಗೆ ತಮ್ಮ ಬೋರೆವೆಲ್‌ಗಳಲ್ಲಿ ನೀರು ಇದ್ದರೂ ಕೂಡ ವಿದ್ಯುತ್ ಸಂಪರ್ಕವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದೇ ವಿಚಾರವು ಕಳೆದ ಅಧಿವೇಶನದಲ್ಲೂ ಸಹ ಚರ್ಚೆಯಾಗಿದೆ. ಬರಗಾಲದ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಿರ್ಬಂಧವನ್ನು ತೆಗೆದು ಹಾಕುತ್ತೇವೆಂಬ ಘೋಷಣೆಯನ್ನು ಮಾಡಿದ್ದರು. ಆಗ ಸ್ವಲ್ಪ ಅನುಕೂಲವಾಗಿತ್ತು ಈಗಲೂ ಸಹ ಅದೇ ಪ್ರಕಾರವಾಗಿ ಮುಂದುವರಿಯುತ್ತಿದೆ. ಈಗ ಹಾಕಿರತಕ್ಕಂತಹ ಕಪ್ಪು ಮತ್ತು ಬೂದು ಮಿಶ್ರಿತ ನಿರ್ಬಂಧವನ್ನು ತೆಗೆದುಹಾಕಿ ಆ ರೈತರ ಬಾವಿಯಲ್ಲಿ ಅಥವಾ ಬೋರ್‌ವೆಲ್‌ನಲ್ಲಿ ನೀರು ಇರಲಿ, ಅವರಿಗೆ ವಿದ್ಯುತ್ ಸಂಪರ್ಕವನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಅದರ ಜೊತೆಗೆ ಅಕ್ರಮ ಮತ್ತು ಸಕ್ರಮ ವ್ಯವಸ್ಥೆಯಲ್ಲಿಯೂ ಕೂಡ ಆ ಒಂದು ಬೂದು ಮತ್ತು ಕಪ್ಪು ಮಿಶ್ರಿತ ನಿರ್ಬಂಧ ಇರತಕ್ಕಂತಹ ರೈತರಿಗೆ ವಿದ್ಯುತ್ ಸಂಪರ್ಕವನ್ನು ತೆಗೆದುಕೊಳ್ಳುವಂತಹ ಸಾಧ್ಯತೆಗಳು ಇಲ್ಲ. ಅವರಿಗೆ ಆ ಒಂದು ಅಡಿಯಲ್ಲಿ ಕೂಡ ಸಂಪರ್ಕವನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇದರ ಜೊತೆಗೆ ಅಕ್ರಮ ಮತ್ತು ಸಕ್ರಮ ಮಾಡಿಕೊಳ್ಳುವ ಬಗ್ಗೆ ಏಪ್ರಿಲ್-6ರವರೆಗೆ ಅವಧಿಯನ್ನು ಏನು ಕೊಟ್ಟಿದ್ದೀರಿ ಅದನ್ನು ಜೂನ್-30ರವರೆಗೆ ವಿಸ್ತರಣೆ ಮಾಡಬೇಕೆಂಬ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇಂಧನ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎ.ವೀರಕುಮಾರ್ ಪಾಟೀಲ್: ಇದಕ್ಕೆ ಸಂಬಂಧಪಟ್ಟಂತಹ ಪ್ರಪೋಸಲ್ ಸರ್ಕಾರದ ಮುಂದೆ ಇದೆ. ಇದರ ಬಗ್ಗೆ ಮುಂದೆ ಕ್ರಮ ಕೈಗೊಳ್ಳಲಾಗುವುದು.

ಬಸ್ ನಿಲ್ದಾಣಕ್ಕಾಗಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವತಿಯಿಂದ ಸ್ಥಳ ಖರೀದಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 80(878)

ಸದಸ್ಯರ ಹೆಸರು: ಶ್ರೀ ಅಂಗಾರ ಎಸ್(ಸೂಳ್ಯ)